www.ecourtsindia.com

<u>4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>

ಸಿಸಿ ನಂ- 10022/2013 **ಚಾ.ಸಾ.-** 5 ಅ.ಸಾ.-3

ಪ್ರ.ವ.ಬೊ. ದಿಃ 15.02.2019

ಸಾಕ್ಷಿದಾರನ ಹೆಸರು : ರಮೇಶ್

ತಂದೆಯ ಹೆಸರು : ಶಿವರೆಡ್ಡಿ

ವಯಸ್ಸು : 48 ವರ್ಷ

ಕೆಲಸ : ರೈತರು

ವಾಸ : ಯಲಹಂಕ, ಬೆಂಗಳೂರು

<u>ಮುಖ್ಯ ವಿಚಾರಣೆ ಸ್ಪೆ.ಪಿ.ಪಿ ರವರಿಂದಃ</u>

ಈಗ ತೋರಿಸುತ್ತಿರುವ ದಾಖಲೆಗೆ ನನ್ನ ಸಹಿ ಇದ್ದು, ಸದರಿ ದಾಖಲೆ ಸ್ಥಳ ಪಂಚನಾಮೆಯಾಗಿದ್ದು, ಸದರಿ ದಾಖಲೆ ಈಗಾಗಲೇ ನಿ.ಪಿ.2 ಆಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಸಿಂಗಾಪುರ ಮುಖ್ಯರಸ್ತೆಯಲ್ಲಿ ಸರ್ವೆ ನಂ.4 ರಿಂದ 6 ಜಮೀನುಗಳಲ್ಲಿ ಮಾಡಿದ್ದೇನೆ. ದಿಃ 30.10.2013 ರಂದು ಸಹಿ ಮಾಡಿದ್ದೇನೆ. ಸುಮಾರು 11.00 ರಿಂದ 12.30 ಗಂಟೆವರೆಗೆ ಮಹಜರ್ ಮಾಡಿದ್ದರೆ. ಆ ಸಮಯದಲ್ಲಿ ನಾನು, ಪ್ರಾ.ಸಾ.1, ಆರೋಪಿ ಹಾಗೂ ಪ್ರಾ.ಸಾ.2 ರವರು ಹಾಜರಿದ್ದೆವು. ಪೊಲೀಸರು ನನಗೆ ಅಲ್ಲಿ ವಿಷಯವನ್ನು ಓದಿ ಹೇಳಿದ್ದರು. ನಂತರ ನಾನು ಸಹಿ ಮಾಡಿದ್ದೆ.

ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

(ರೂಪ ಆರ್ ಕುಲಕರ್ಣಿ)
4ನೇ ಅ ಮು ಮ ದಂ, ಬೆಂಗಳೂರು

This is a True Copy of the Court Records Online. Authenticated @ districts.ecourtsindia.com/cnr/KABC030422142013/truecopy/order-3.pdf

ಸಾಕ್ಷಿಯನ್ನು ಈ ದಿನಾಂಕಃ 17.10.2019 ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಪಾಟೀ ಸವಾಲುಃ ಶ್ರೀ ಎ.ಎಸ್.ಎಲ್ ವಕೀಲರಿಂದಃ

ನನ್ನ ಊರು ಚೊಕ್ಕನಹಳ್ಳಿ, ಯಲಹಂಕ ಹೋಬಳಿ. ನಾನು ನನ್ನ ಊರಿನಲ್ಲಿ ವ್ಯವಸಾಯ ಮಾಡುತ್ತಿದ್ದೇನೆ. 2011 ರಿಂದ 2013 ಇಸವಿಯಲ್ಲಿ ನಾನು ವಿದ್ಯಾರಣ್ಯಪುರ ಪೊಲೀಸ್ ಠಾಣೆಗೆ ಭೇಟಿ ಕೊಟ್ಟಿದ್ದೇನೆ. ಅಲ್ಲಿ ಮಹಜರ್‌ಗೆ ಸಹಿ ಮಾಡಿದ್ದೇನೆ. ಈಗ ತೋರಿಸಿದ ನಿ.ಪಿ.2 ರಲ್ಲಿರುವ ಸಹಿ ನನ್ನದು. ಅದಕ್ಕೆ ನಾನು ಪೊಲೀಸ್ ಠಾಣೆಗೆ ಹೋದಾಗ ಹಾಕಿದ್ದೆ. ನಿ.ಪಿ.2 ಪಂಚನಾಮೆಯಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನಗೆ ಪಿರ್ಯಾದಿಯ ಪರಿಚಯ ಇದೆ. ಆ ಕಾರಣ ಈ ಕೇಸಿಗೆ ಸಂಬಂಧಿಸಿದ ಯಾವುದೇ ವಿಷಯ ನನಗೆ ಖುದ್ದು ಮಾಹಿತಿ ಇಲ್ಲ. ನನಗೆ ಈ ಕೇಸಿನ ಬಗ್ಗೆ ಯಾವುದೇ ಮಾಹಿತಿ ಇಲ್ಲದೇ ಇದ್ದರೂ ಪಿರ್ಯಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ 'ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು

This is a True Copy of the Court Records Online. Authenticated @ districts.ecourtsindia.com/cnr/KABC030422142013/truecopy/order-3.pdf